ದಿನಾಂಕಃ 13.10.2017 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು:- ಆರೋಪಿಯ ಪರವಾಗಿ ಶ್ರೀ. ಬಿ.ಆರ್. ವಕೀಲರಿಂದ ಃ-

ನಾನು ಎಸ್.ಎಸ್.ಎಲ್.ಸಿ.ವರೆಗೆ ಓದಿದ್ದೇನೆ. ಆರೋಪಿಗಳು ನಮಗೆ ಹಳೆಯ ಸಂಬಂಧಿಕರು ಎಂದು ಸೂಚಿಸುವುದು ಸರಿಯಲ್ಲ. ಅವರು ನಮಗೆ ಹಳೆಯ ಸಂಬಂದ ಆಗಿದ್ದರೂ ಕೂಡ ಉದ್ದೇಶಪೂರ್ವಕವಾಗಿ ಹಳೇ ಸಂಬಂಧಿಕರಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ಈ ಮದುವೆ ಪೂರ್ವದಲ್ಲಿಯೇ ನಮ್ಮ ಮತ್ತು ಆರೊಪಿ ಕುಟುಂಬಗಳ ನಡುವೆ ಒಡನಾಟ ಇತ್ತು ಎಂದು ಸೂಚಿಸುವುದು ಸರಿಯಲ್ಲ. ನಾನು ಮತ್ತು ಪ್ರಾಸಾ. 1 ಗಂಗಾಂಜನಪ್ಪರವರು 20 ವರ್ಷಗಳ ಹಿಂದೆ ಬೇರೆಯಾಗಿ ಪ್ರತ್ಯೇಕವಾಗಿ ವಾಸವಾಗಿದ್ದೇವೆ ಎನ್ನುವುದು ಸರಿ. ಪ್ರಾಸಾ1 ರವರ ಕುಟುಂಬ ಕೂಡ ಕೂಲಿನಾಲಿ ಮಾಡಿ ಜೀವನ ನಡೆಸುತ್ತಾರೆ ಎನ್ನುವುದು ಸರಿ. 1ನೇ ಆರೋಪಿ ನನ್ನ ಅಣ್ಣನ ಮಗಳು ಸುಕನ್ಯಾಳನ್ನು ಮದುವೆ ಮಾಡಿಕೊಡುವ ಪೂರ್ವದಲ್ಲಿ ಕೆಎಸ್ಆರ್‌ಟಿಸಿಯಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದರು ಎನ್ನುವುದು ಸರಿ. 2 ಮತ್ತು 3ನೇ ಆರೋಪಿಗಳಿಗೆ 1ನೇ ಆರೋಪಿ ಒಬ್ಬನೇ ಮಗ ಹಾಗೂ ಆತನ ತಂಗಿ ಅವರಿಗೆ ಒಬ್ಬಳೇ ಮಗಳು, ಅವಳ ಮದುವೆ 1ನೇ ಆರೋಪಿ ಮದುವೆಗಿಂತ 15 ವರ್ಷ ಮೊದಲೇ ಮದುವೆಯಾಗಿ ಬೆಂಗಳೂರಿನಲ್ಲಿ ವಾಸವಾಗಿದ್ದರು ಎನ್ನುವುದು ಸರಿ. ಆರೋಪಿಗಳಿಗೆ ಅವರ

ಊರಿನಲ್ಲಿ ಜಮೀನು, ಪಶುಗಳು, ಕುರಿ, ಮೇಕೆ ಸಾಕಿಕೊಂಡು ಸ್ವಂತ ಮನೆ ಹೊಂದಿದ್ದರು ಎನ್ನುವುದು ಸರಿ. 1ನೇ ಆರೋಪಿ ತನ್ನ ನೌಕರಿಯಲ್ಲಿ ಬಬಿಡುವು ಸಿಕ್ಕಾಗ ಅವರ ತಂದೆ ತಾಯಿ ಜೊತೆಗೆ ಕೃಷಿ ಕೆಲಸ ಕೂಡ ಮಾಡುತ್ತಿದ್ದ ಎನ್ನುವುದು ಸರಿಯಲ್ಲ, ನಾವು ಮೂಲತಃ ಮರಾಠಿಗರು ಎನ್ನುವುದು ಸರಿಯಲ್ಲ, ನಮ್ಮ ಕುಟುಂಬದ ಮತ್ತು ಜನಾಂಗದ ಪದ್ದತಿಯಂತೆ ನಾವೇ ನಮ್ಮ ಹೆಣ್ಣುಮಕ್ಕಳ ಮದುವೆ ಮಾಡಿಕೊಡಬೇಕು ಎನ್ನುವುದು ಸರಿ. 1ನೇ ಆರೋಪಿ ಮದುವೆಗೆ ಪೂರ್ವದಲ್ಲಿಯೇ ಅವರು ಊರಲ್ಲಿರುವ ಮನೆಯನ್ನು ದುರಸ್ತಿ ಮಾಡಿಕೊಂಡಿದ್ದರು ಎನ್ನುವುದು ಸರಿಯಲ್ಲ, ಮದುವೆ ಆದ ಮೇಲೆ ಆರೋಪಿಗಳು ತಮ್ಮ ಮನೆಗೆ ಟಿವಿ ತೆಗೆದುಕೊಂಡರು ಎದು ಸೂಚಿಸುವುದು ಸರಿಯಲ್ಲ, ಆದರೆ ಬೀರು, ಮಂಚ, ಹಸು, ಟಿವಿಗಳನ್ನು ಮದುವೆ ಆದ ಮೇಲೆ ನಮ್ಮ ಮಗಳಿಗೆ ಉಡುಗೊರೆಯಾಗಿ ನೀಡಿದ್ದೆವು. ನಾವು ಆರೊಪಿಗಳಿಗೆ ಏನೇನು ಕೊಟ್ಟಿದ್ದೇವೆ ಎನ್ನುವ ಬಗ್ಗೆ ದಾಖಲೆಗಳಿವೆ, ಅವುಗಳನ್ನು ಪೊಲೀಸರಿಗೆ ಕೊಟ್ಟಿದ್ದೆವು. ನಾವು ಯಾವುದೇ ವಸ್ತುಗಳನ್ನು ಆರೊಪಿಗಳಿಗೆ ನೀಡದೇ ಇರುವ ಕಾರಣ ಅಂತಹ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎನ್ನುವುದು ಸರಿಯಲ್ಲ.

2. ಸುಕನ್ಯಾ 9 ತಿಂಗಳ ಗರ್ಭಿಣಿ ಇದ್ದ ಸಮಯದಲ್ಲಿ ತವರು ಮನೆಗೆ ಬಂದಿದ್ದಳು ಎನ್ನುವುದು ಸರಿಯಲ್ಲ, ಆದರೆ ಅವಳು 5-6 ತಿಂಗಳ ಸಮಯದಲ್ಲಿ ಬಂದಿದ್ದಳು. ಸುಕನ್ಯಾಳಿಗೆ ಗಂಡನ ಮನೆಯವರು 9 ತಿಂಗಳ ಗರ್ಭಿಣಿ ಇದ್ದಾಗ ಸೀಮಂತ ಮಾಡಿ ಕಳುಹಿಸಿಕೊಟ್ಟರು ಎನ್ನುವುದು ಸರಿ.

ಮದುವೆ ಆದ ಮೇಲೆ ಸುಕನ್ಯಾ ಮತ್ತು ಅವಳ ಗಂಡ ತವರು ಮನೆಗೆ ಬಂದು ಹೋಗಿ ಮಾಡುತ್ತಿದ್ದರು ಎನ್ನುವುದು ಸರಿ. ಸುಕನ್ಯಾಳ ತಂದೆ ತಾಯಿ ಕೂಡ ಅವರ ಅಳಿಯನ ಮನೆಗೆ ಭೇಟಿ ನೀಡುತ್ತಿದ್ದರು, ಅಲ್ಲದೇ ಬೆಳೆ ಕಟಾವು ಸಮಯದಲ್ಲಿ ಸುಕನ್ಯಾಳ ತಂದೆ ತಾಯಿಯರು ಕೂಡ ಅವರ ಬೀಗರಿಗೆ ಕೆಲಸದಲ್ಲಿ ಬಾಗಿ ಆಗಿ ಸಹಾಯ ಮಾಡುತ್ತಿದ್ದರು, ಹಾಗೇ ಸುಕನ್ಯಾಳ ತಂದೆ ತಾಯಿಯರಿಗೆ ಕೂಡ ಈ ಆರೋಪಿಗಳು ಸಹಾಯ ಮಾಡುತ್ತಿದ್ದರು ಎನ್ನುವುದು ಸರಿ. ಸುಕನ್ಯಾ ಗರ್ಭಿಣಿಯಾದ ನಂತರ ಈ ಆರೋಪಿಗಳು ಅವಳನ್ನು ಲಕ್ಷ್ಮೀಪುರ ಮತ್ತು ರಾಮನಗರದ ವೈದ್ಯರ ಬಳಿ ತೋರಿಸುತ್ತಿದ್ದರು ಎನ್ನುವ ವಿಚಾರ ಗೊತ್ತಿಲ್ಲ. ಅಳಿಯ ಮಗಳು ಊರಿಗೆ ಬಂದಾಗ ನಮ್ಮ ಮನೆಗೂ ಕೂಡ ಬರುತ್ತಿದ್ದರು, ಆಗ ನಾವು ಕೂಡ ಅವರನ್ನು ಸತ್ಕರಿಸುತ್ತಿದ್ದೆವು ಎನ್ನುವುದು ಸರಿ. ಅಳಿಯ ಮಗಳು ಊರಿಗೆ ಬಂದಾಗ ತುಮಕೂರಿಗೆ ಅವರೆಲ್ಲಾರೂ ಒಟ್ಟಿಗೆ ಹೋಗಿ ಸಿನಿಮಾ ನೊಡಿಕೊಂಡು ಬರುತ್ತಿದ್ದರು ಎನ್ನುವುದು ಈ ಪ್ರಕರಣಕ್ಕೆ ಪ್ರಸ್ತುತವಲ್ಲದ ಪ್ರಶ್ನೆ ಎಂದು ಸಾಕ್ಷಿದಾರರು ಉತ್ತರಿಸಿದ್ದಾರೆ. ಸುಕನ್ಯಾಳನ್ನು ಪರೀಕ್ಷಿಸಿದ ವೈದ್ಯರು ಇನ್ನು 4-5 ದಿನಗಳಲ್ಲಿ ಹೆರಿಗೆ ಆಗಬಹುದು ಎಂದು ಹೇಳಿದ್ದರಿಂದ 7 ದಿನಗಳ ಕಾಲ 1ನೇ ಆರೋಪಿ ಸುಕನ್ಯಾಳ ತವರೂರಲ್ಲಿ ಇದ್ದರು ಎನ್ನುವುದು ನನಗೆ ಗೊತ್ತಿಲ್ಲ. ಸುಕನ್ಯಾಳನ್ನು ತುಮಕೂರು ಆಸ್ಪತ್ರೆಯಲ್ಲಿ ಹೆರಿಗೆಗಾಗಿ ಸೇರಿಸಿದ್ದರು, ಆಸ್ಪತ್ರೆ ಹೆಸರು ನೆನಪಿಲ್ಲ. ಸುಕನ್ಯಾಳ ಹೆರಿಗೆ ಸಮಯದಲ್ಲಿ ಹಣದ ಅವಶಕತೆ ಇದ್ದ ಕಾರಣ 1ನೇ ಆರೋಪಿ ತನ್ನ ಕೊರಳಲ್ಲಿದ್ದ ಚಿನ್ನದ ಚೈನನ್ನು 16 ಸಾವಿರ ರೂಪಾಯಿಗೆ ಮಾರಾಟ

ಮಾಡಿ ಹೆರಿಗೆ ಖರ್ಚುವೆಚ್ಚಗಳನ್ನು ನಿರ್ವಹಿಸಿದರು ಎನ್ನುವುದು ಸರಿಯಲ್ಲ. ಸುಕನ್ಯಾ ಹೆರಿಗೆ ಆದ 10 ತಿಂಗಳ ನಂತರ ಮಗುವಿನ ಜೊತೆಗೆ ತನ್ನ ಗಂಡನ ಮನೆಗೆ ಬಂದಳು ಎನ್ನುವುದು ಸರಿ.

3. 1ನೇ ಆರೋಪಿ ತನ್ನ ಸೇವಾಪುಸ್ತಕದಲ್ಲಿ ಮದುವೆ ಪೂರ್ವದಲ್ಲಿ ತನ್ನ ತಾಯಿಯನ್ನು ನಾಮನಿರ್ದೇಶನ ಮಾಡಿದ್ದರು, ಅದರೆ ಮದುವೆ ನಂತರ ತನ್ನ ಹೆಂಡತಿ ಸುಕನ್ಯಾಳ ಹೆಸರನ್ನು ನಾಮನಿರ್ದೇಶನ (ನಾಮಿನೀ) ಮಾಡಿದ್ದರು ಎನ್ನುವುದು ಸರಿ. ಸುಕನ್ಯಾಳ ಮಗುವಿಗೆ ಕಾಯಿಲೆ ಇತ್ತು ಎನ್ನುವುದು ಗೊತ್ತು, ಆದರೆ ಅದು ಹೃದಯದಲ್ಲಿ ರಂಧ್ರಗಳು ಇದ್ದವು ಎನ್ನುವ ವಿಚಾರ ಗೊತ್ತಿಲ್ಲ. ಅವಳ ಮಗುವಿಗೆ ಬೆಂಗಳೂರಿನ ಜಯದೇವ ಆಸ್ಪತ್ರೆಯಲ್ಲಿ ಆಪರೇಷನ್ ಆಗಿದ್ದು ಹಿಂದಿನಿಂದ ಗೊತ್ತಾಯಿತು. ಆ ಸಮಯದಲ್ಲಿ ನಾನು ಮತ್ತು ನಮ್ಮ ಕುಟುಂಬದವರು ಆಸ್ಪತ್ರೆಗೆ ಭೇಟಿ ನೀಡಿಲ್ಲ ಎನ್ನುವುದು ಸರಿ. 1ನೇ ಆರೋಪಿ ತನ್ನ ಮಗಳಿಗೆ ಜಯದೇವ ಆಸ್ಪತ್ರೆಯಲ್ಲಿ 50 ಸಾವಿರ ರೂ ಖರ್ಚು ಮಾಡಿ ಚಿಕಿತ್ಸೆ ಕೊಡಿಸಿ ಮಗುವನ್ನು ಉಳಿಸಿಕೊಂಡು ಬಂದರು ಎನ್ನುವುದು ಸರಿಯಲ್ಲ. 1ನೇ ಆರೋಪಿಗೆ ತನ್ನ ಇಲಾಖೆಯಿಂದ ಆ ವೈದ್ಯಕೀಯ ಖರ್ಚುವೆಚ್ಚಗಳನ್ನು ಹಿಂದಿರುಗಿಸಿದ್ದಾರೆ ಎನ್ನುವುದು ಸರಿ ಇರಬಹುದು. ಸುಕನ್ಯಾಳ ಮದುವೆ ನಂತರ ಅವಳ ಗಂಡನ ಊರಿಗೆ ಮತ್ತು ಮನೆಗೆ ಯಾವತ್ತೂ ಭೇಟಿ ನೀಡಿಲ್ಲ ಎನ್ನುವುದು ಸರಿಯಲ್ಲ.

4. ಸುಕನ್ಯಾ ತನ್ನ ಮಗುವಿಗೆ ಈ ರೀತಿ ಖಾಯಿಲೆ ಇದೆ ಎನ್ನುವ ಕಾರಣ ತುಂಬಾ ದುಃಖಿಸುತ್ತಿದ್ದಳು ಎನ್ನುವುದು ಸರಿ. ಆರೋಪಿಗಳ ಊರು

ಗೊಲ್ಲರದೊಡ್ಡಿ ಕಾಡು ಪ್ರದೇಶದಲ್ಲಿ ಇದೆ ಎನ್ನುವುದು ಸರಿ. ಆ ಊರಿಗೆ ಯಾವುದೇ ಸೌಲಭ್ಯಗಳು ಇರಲಿಲ್ಲ ಎನ್ನುವುದು ಸರಿಯಲ್ಲ. ಹೃದಯ ಖಾಯಿಲೆಗೆ ಸಂಬಂಧಿಸಿದಂತೆ ರಾಮನಗರ ಹಾಗೂ ಗೊಲ್ಲರದೊಡ್ಡಿಯಲ್ಲಿ ಆಸ್ಪತ್ರೆಗಳು ಇಲ್ಲ ಹಾಗೂ ಇರಲಿಲ್ಲ ಎನ್ನುವುದು ಸರಿ. ಆ ಮಗುವಿಗೆ ಚಿಕಿತ್ಸೆ ಕೊಡಿಸಿ ಗೊಲ್ಲರದೊಡ್ಡಿಗೆ ಹೋದರು ಎನ್ನುವುದು ಸರಿ. ಗೊಲ್ಲರದೊಡ್ಡಿಯಿಂದ ಪ್ರತಿವಾರ ಜಯದೇವ ಆಸ್ಪತ್ರೆಗೆ ಪ್ರತಿವಾರ ಆ ಮಗುವನ್ನು ಪರೀಕ್ಷೆಗಾಗಿ ಕರೆದುಕೊಂಡು ಹೋಗುತ್ತಿದ್ದರು ಎನ್ನುವುದು ಸರಿಯಲ್ಲ. ಆದರೆ ತಿಂಗಳಿಗೊಮ್ಮೆ ಕರೆದುಕೊಂಡು ಹೋಗುತ್ತಿದ್ದರು. ಮಗುವಿನ ಆರೋಗ್ಯದ ಬಗ್ಗೆ ವಿಚಾರಿಸಲು ನಾನು ನಮ್ಮ ಅಣ್ಣ ಹೋಗಿದ್ದೆವು. ಆ ಮಗುವನ್ನು ಆಸ್ಪತ್ರೆಯಿಂದ ಮನೆಗೆ ಕರೆದುಕೊಂಡು ಬಂದ 8 ದಿನಗಳ ನಂತರ ನಾನು ನಮ್ಮ ಅಣ್ಣ ಆ ಮಗುವನ್ನು ನೋಡಲು ಹೋಗಿದ್ದೆವು. ಆಪರೇಷನ್ ಆದ ಮೇಲೆ ಮಗುವಿಗೆ ಆಗಾಗ ಜ್ವರ ಬರುತ್ತಿತ್ತು, ಉಸಿರಾಟದ ತೊಂದರೆ ಆಗುತ್ತಿತ್ತು ಎಂದು ಸೂಚಿಸುವುದು ಸರಿಯಲ್ಲ.

5. ಸುಕನ್ಯಾ ತನ್ನ ಗಂಡನಿಗೆ ನಿಮ್ಮ ಇಲಾಖೆಯಿಂದ ವಸತಿ ಗೃಹ ನೀಡುತ್ತಾರೆ, ಅದನ್ನು ಪಡೆದುಕೊಳ್ಳಿ, ಮಗುವಿನ ಚಿಕಿತ್ಸೆಗೆ ಅನುಕೂಲವಾಗುತ್ತೆ ಎಂದು ಒತ್ತಾಯಿಸುತ್ತಿದ್ದಳು ಎನ್ನುವುದು ಸರಿಯಲ್ಲ. ಆರೋಪಿಗಳು ಊರಲ್ಲಿರುವ ಮನೆಯನ್ನು ಕೆಡಿಸಿ, ಹೊಸದಾದ ಮನೆ ಕಟ್ಟಬೇಕೆಂಬ ಉದ್ದೇಶ ಹೊಂದಿದ್ದರು ಎನ್ನುವುದು ಸರಿಯಲ್ಲ. ಸುಕನ್ಯಾಳಿಗೆ ಊರಲ್ಲಿ ಹೊಸ ಮನೆ ಕಟ್ಟುವ ಬಗ್ಗೆ ವಿರೋದ ಇತ್ತು, ಅವಳಿಗೆ

ಬಿಡದಿಯಲ್ಲಿಯೇ ಮನೆ ಮಾಡಿಕೊಂಡು ಇರುವ ಉದ್ದೇಶ ಹೊಂದಿದ್ದಳು ಎನ್ನುವುದು ಸರಿಯಲ್ಲ. ಗಂಡ ಹೆಂಡತಿ ಆ ಮಗುವಿನ ಹುಟ್ಟಿದ ಹಬ್ಬದ ಆಚರಣೆಗಾಗಿ ಬೆಂಗಳೂರಿಗೆ ಹೋಗಿ ಸಾಮಾಗ್ರಿಗಳನ್ನು ಖರೀದಿಸಿಕೊಂಡು ಬಂದಿದ್ದರು ಮತ್ತು ತಯಾರಿ ಕೂಡ ಮಾಡಿಕೊಂಡಿದ್ದರು ಎನ್ನುವುದು ಸರಿ. 1ನೇ ಆರೋಪಿ ತನ್ನ ಹೆಂಡತಿಗೆ ಉಪಯೋಗಕ್ಕಾಗಿ ಒಂದು ಮೊಬೈಲ್ ಫೋನು ಮತ್ತು ಮನೆಯಲ್ಲಿ ಕೂಡ ಒಂದು ಲ್ಯಾಂಡ್‌ಲೈನ್ ಹೊಂದಿದ್ದರು ಎನ್ನುವುದು ಸರಿಯಲ್ಲ. ಸುಕನ್ಯಾ ಆ ಸೌಲಭ್ಯವನ್ನು ಸದಾ ಉಪಯೋಗಿಸುತ್ತಿದ್ದಳು ಎನ್ನುವುದು ಸರಿಯಲ್ಲ, ಹಾಗೂ ಅಂತಹ ಯಾವುದೇ ಸೌಲಭ್ಯಗಳು ಅವಳಿಗೆ ಇರಲಿಲ್ಲ. 1ನೇ ಆರೋಪಿ ತನ್ನ ಮಗಳಿಗೆ ಹಾಲಿಗೆ ತೊಂದರೆ ಆಗುತ್ತದೆ ಎಂಬ ಕಾರಣದಿಂದ ತನ್ನ ಮಾವನಿಂದ 16 ಸಾವಿರ ರೂ ಬೆಲೆ ನೀಡಿ ಹಸು ಖರೀದಿಸ್ಸಿರು ಎನ್ನುವುದು ಸರಿಯಲ್ಲ.

6. ಸುಕನ್ಯಾಳಿಗೆ ಹೆಚ್ಚಿನ ವಿದ್ಯಾಭ್ಯಾಸ ಕೊಡಿಸಬೇಕೆಂಬ ಉದ್ದೇಶದಿಂದ ಅವಳ ಎಲ್ಲಾ ವಿದ್ಯಾರ್ಹತೆ ದಾಖಲಾತಿಗಳನ್ನು 1ನೇ ಆರೋಪಿ ಪಡೆದುಕೊಡಿದ್ದ ಎನ್ನುವುದು ಸರಿಯಲ್ಲ, ಆದರೆ ಅವುಗಳ ಅಧಾರದಲ್ಲಿ ಸಾಲ ಪಡೆಯುವ ಉದ್ದೇಶ ಹೊಂದಿದ್ದ. ನಮ್ಮ ಅಣ್ಣನ ಮತ್ತು ನಮ್ಮ ಕೌಟುಂಬಿಕ ವಿಷಯಗಳು ಬೇರೆ ಬೇರೆ ಎಂದು ಸೂಚಿಸುವುದು ಸರಿಯಲ್ಲ. ನಮ್ಮ ಅಣ್ಣನ ಮನೆಯ ವೈಯಕ್ತಿಕ ವಿಚಾರಗಳು ನನಗೆ ಗೊತ್ತಿಲ್ಲ ಎನ್ನುವುದು ಸರಿಯಲ್ಲ. 1ನೇ ಆರೋಪಿ ಊರಲ್ಲಿರುವ ಹಳೆ ಮನೆಯನ್ನು ದುರಸ್ತಿ ಮಾಡಿಕೊಂಡು, ಊರಲ್ಲಿಯೇ

ವಾಸವಾಗಿ ಇರುವ ತೀರ್ಮಾನ ಕೈಗೊಂಡಿದ್ದರಿಂದ ಅದು ಸುಕನ್ಯಾಳಿಗೆ ಇಷ್ಟ ಇರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. 1ನೇ ಆರೋಪಿ ಗೊಲ್ಲರದೊಡ್ಡಿಯಲ್ಲಿ ತಮ್ಮ ಮನೆಯದುರಸ್ತಿ ಕಾರ್ಯವನ್ನು ಪ್ರಾರಂಭಿಸಿದ್ದರು ಎನ್ನುವುದು ಸರಿಯಲ್ಲ. ಸುಕನ್ಯಾ ಯಾವುದೇ ರೀತಿಯಲ್ಲೂ ಹಳ್ಳಿಯಲ್ಲಿ ಮನೆ ಕಟ್ಟಿಕೊಂಡು ವಾಸವಾಗಿರುವುದು ಬೇಡ ಎಂದು ಹಠ ಮಾಡುತ್ತಿದ್ದಳು ಎನ್ನುವುದು ಸರಿಯಲ್ಲ. ಮಗು ಆಗುವುದಕ್ಕಿಂತ ಮೊದಲು ಇದ್ದಂತೆ ಮಗು ಆದ ನಂತರ ಅವಳು ಇರಲಿಲ್ಲ ಎನ್ನುವುದು ಸರಿ. ಆದರೆ ಅದು ಮಗುವಿನ ಚಿಂತೆ ಇಂದ ಅಲ್ಲ, ಈ ಆರೋಪಿಗಳ ಹಿಂಸೆಯಿಂದ. ಈ ಆರೋಪಿಗಳು ಸುಕನ್ಯಾಳಿಗೆ ಎಂದೂ ಯೊವುದೇ ರೀತಿ ವರದದಕ್ಷಿಣೆ ತರುವಂತೆ ಹಿಂಸೆ ನೀಡಿಲ್ಲ ಹಾಗೂ 30 ಸಾವಿರ ರೂಗಳನ್ನು ತರುವಂತೆ ಒತ್ತಾಯಿಸಿಲ್ಲ ಎನ್ನುವುದು ಸರಿಯಲ್ಲ. ಅವಳು ಸಾಯುವ 1 ವಾರದ ಪೂರ್ವದಲ್ಲಿ ನಮ್ಮ ಅಣ್ಣ, ಅತ್ತಿಗೆ, ಸುಕನ್ಯಾ, 1ನೇ ಆರೋಪಿ ಬೆಂಗಳೂರಿನ ಜಯದೇವ ಆಸ್ಪತ್ರೆಗೆ ಮಗುವಿನೊಂದಿಗೆ ಹೋಗಿ ಪರೀಕ್ಷೆ ಮಾಡಿಸಿಕೊಂಡು ಬಂದರು ಎನ್ನುವುದು ಸರಿಯಲ್ಲ.

7. ನಮಗೆ ದೂರವಾಣಿ ಮೂಲಕ ವಿಷಯ ತಿಳಿದ ನಂತರ ಸಂಜೆ 4.30 ಗಂಟೆ ಸುಕನ್ಯಾಳ ಮನೆಗೆ ಬಂದೆವು. ನಾವು ಅಲ್ಲಿಗೆ ಹೋದಾಗ ಊರಿನವರು ಇದ್ದರು, ಆದರೆ ಪೊಲೀಸರು ಇರಲಿಲ್ಲ, ನಮ್ಮ ಅಣ್ಣ ಠಾಣೆಗೆ ಹೋಗಿ ದೂರು ನೀಡಿದ ನಂತರ ಪೊಲೀಸರು ರಾತ್ರಿ 8 ಗಂಟೆಗೆ ಬಂದು ಮಹಜರ್ ಕಾರ್ಯಾಚರಣೆ ನಡೆಸಿದರು. ಪೊಲೀಸರು ನನಗೆ ಅಲ್ಲಿಯೇ ವಿಚಾರಣೆ ಮಾಡಿದರು, ಆಗ ನಾನು ನಡೆದ ಎಲ್ಲಾ ಘಟನೆಗಳನು ತಿಳಿಸಿದೆ.

ಪುನಃ ನುಡಿಯುತ್ತೇನೆ ಪೊಲೀಸರು ಅಲ್ಲಿ ಕೇವಲ ಪಂಚನಾಮೆ ಮಾಡಿ ಸಹಿ ಪಡೆದರು ನಮ್ಮನ್ನೇನೂ ವಿಚಾರಣೆ ಮಾಡಲಿಲ್ಲ. ಪೊಲೀಸರೊಂದಿಗೆ ನಾನು ಸ್ವತಃ ಹೋಗಿ ಏನೂ ಮಾತಾಡಿಲ್ಲ. ವಿಷಯವನ್ನು ಪೊಲೀಸರಿಗೆ ತಿಳಿಸುವ ಇಚ್ಛೆ ಇರಲಿಲ್ಲ. ಸುಕನ್ಯಾಳನ್ನು ಉಳಿಸಿಕೊಳ್ಳಬೇಕೆಂಬ ಉದ್ದೇಶದಿಂದ 1ನೇ ಆರೋಪಿ ಮಾಗಡಿ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದರು, ತದನಂತರ ಅವಳನ್ನು ಬೆಂಗಳೂರಿಗೆ ಆ್ಯಂಬುಲೆನ್ಸ್‌ನಲ್ಲಿ ಕರೆದುಕೊಂಡು ಹೋಗುವಾಗ ಮಾರ್ಗ ಮದ್ಯದಲ್ಲಿ ಮೃತಪಟ್ಟಳು ಎನ್ನುವುದು ಗೊತ್ತಿಲ್ಲ. 1ನೇ ಆರೋಪಿ ಸುಕನ್ಯಾಳನ್ನು ಆ್ಯಂಬುಲೆನ್ಸ್‌ನಲ್ಲಿ ಕರೆದುಕೊಂಡು ಹೋಗಿರಲಿಲ್ಲ, ಆದರೆ ಟಾಟಾ ಏಸ್‌ನಲ್ಲಿ ಕರೆದುಕೊಂಡು ಹೋಗಿದ್ದರು. ಪೊಲಿಸರು ಮಹಜರ್‌ಗೆ ನನ್ನ ಸಹಿ ಪಡೆದ ನಂತರ ನಾನೆಂದೂ ಅವರನ್ನು ಭೇಟಿ ಮಾಡಿಲ್ಲ, ಅವರೂ ಕೂಡ ನನ್ನನ್ನು ಭೇಟಿ ಮಾಡಿಲ್ಲ. ಸುಕನ್ಯಾ ಸಾಯುವ 1 ವರ್ಷ ಪೂರ್ವದಿಂದ ಅವಳು ತನ್ನ ತವರುಮನೆಯಲ್ಲಿಯೇ ಇದ್ದಳು ಎನ್ನುವುದು ಸರಿ, ಆದರೆ ಅವಳು ವರದಕ್ಷಿಣೆ ಕಿರುಕುಳದಿಂದ ಅಲ್ಲಿ ಇದ್ದಳು. ವರದಕ್ಷಿಣೆ ಕಿರುಕುಳದಿಂದ ಅವಳು ತವರುಮನೆಯಲ್ಲಿ ಇದ್ದಳು ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

8. ಸುಕನ್ಯಾಳ ಮದುವೆ ಮಾತುಕತೆಯಲ್ಲಿ ಅವಳಿಗೆ ಏನೇನು ಕೊಡಬೇಕು ಎನ್ನುವುದು ನಮ್ಮ ಅಣ್ಣನ ಇಚ್ಛೆಗೆ ಒಳಪಟ್ಟಿತ್ತು ಎನ್ನುವುದು ಸರಿಯಲ್ಲ, ಆದರೆ ನಾವೆಲ್ಲಾ ಸೇರಿ ಮಾತಾಡಿದ್ದೆವು. ಆ ಮಾತುಕತೆಯಲ್ಲಿ ಮದುವೆ ಎಲ್ಲಿ ಮಾಡಬೇಕು, ಹೇಗೆ ನೆರವೇರಿಸಬೇಕು, ಎನ್ನುವ ವಿಷಯ ಮಾತ್ರ ಚರ್ಚೆಯಾಗಿತ್ತು, ಯಾವುದೇ ವರದಕ್ಷಿಣೆ ಮತ್ತು ದುಡ್ಡಿನ ಬಗ್ಗೆ

ಯಾವುದೇ ಚರ್ಚೆ ಆಗಿರಲಿಲ್ಲ ಎನ್ನುವುದು ಸರಿಯಲ್ಲ, ಗಂಗಪ್ಪ ಮತ್ತು ಹನುಮಂತರಾಯಪ್ಪ ಎನ್ನುವವರು ಸಹ ಆ ಮಾತುಕತೆಯಲ್ಲಿ ಭಾಗಿಯಾಗಿರಲಿಲ್ಲ ಎನ್ನುವುದು ಸರಿಯಲ್ಲ. ಮಗು ಆದ ನಂತರ ಈ ಆರೋಪಿಗಳು ಸುಕನ್ಯಾಳಿಗೆ 30 ಸಾವಿರ ರೂ ಹಣ ತರುವಂತೆ ಒತ್ತಾಯಿಸಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿಗಳು ಎಂದೂ ಸುಕನ್ಯಾಳನ್ನು ವರದಕ್ಷಿಣೆ ತರುವಂತೆ ಒತ್ತಾಯಿಸಿ, ಹಿಂಸೆ ನೀಡಿ ತವರುಮನೆಗೆ ಕಳುಹಿಸಿರಲಿಲ್ಲ ಎನ್ನುವುದು ಸರಿಯಲ್ಲ. ನಾನು ಈ ಆರೋಪಿಗಳು ಅವಳಿಗೆ ಹೊಡೆದು, ಹಣವನ್ನು ತರುವಂತೆ ರಾತ್ರಿ ವಾಪಸ್ಸು ತವರು ಮನೆಗೆ ಕಳುಹಿಸಿದರು, ಮಾರನೇ ದಿವಸ ನಾವು ಮತ್ತು ನನ್ನ ಅಣ್ಣ ಗೊಲ್ಲರಹಟ್ಟಿಗೆ ಹೋಗಿ 1 ವಾರದಲಿ 30 ಸಾವಿರ ರೂ ಹಣವನ್ನು ನೀಡುವುದಾಗಿ, ಭರವಸೆ ನೀಡಿ 3 ದಿನಗಳ ನಂತರ ಅವಳನ್ನು ಗಂಡನ ಮನೆಗೆ ಬಿಟ್ಟು ಬಂದೆವು ಎನ್ನುವ ಸಂಗತಿಯನ್ನು ಪೊಲೀಸರಿಗೆ ಹೇಳಿಲ್ಲ ಎನ್ನುವುದು ಸರಿ. ಯಲ್ಲಪ್ಪ ಎನ್ನುವವರು ನಮ್ಮ ಅಣ್ಣನಿಗೆ ಸುಕನ್ಯಾಳ ಬಗ್ಗೆ ಮಾಹಿತಿ ನೀಡಿಲ್ಲ, ಆದರೆ 1ನೇ ಆರೋಪಿ ನಮ್ಮ ಅಣ್ಣನಿಗೆ ಮಾಹಿತಿ ನೀಡಿ ಹೆಂಡತಿಯನ್ನು ಮಾಗಡಿ ಆಸ್ಪತ್ರೆಗೆ ಕರೆದುಕೊಂಡು ಬರುತ್ತಿದ್ದೇನೆ, ಅಲ್ಲಿಗೆ ಬನ್ನಿ ಎಂದು ತಿಳಿಸಿದರು ಎನ್ನುವುದು ಸರಿಯಲ್ಲ. ಯಲ್ಲಪ್ಪ ನನಗೆ ಪರಿಚಯವಿಲ್ಲ ಎನ್ನುವುದು ಸರಿಯಲ್ಲ. ನಾನು ಗೊಲ್ಲರದೊಡ್ಡಿಗೆ ಹೋದಾಗ ಸಹ ಗ್ರಾಮಸ್ಥರು 1ನೇ ಆರೋಪಿ ಸುಕನ್ಯಾಳಿಗೆ 30 ಸಾವಿರ ರೂ ತರುವಂತೆ ಬೆಳಿಗ್ಗೆಯಿಂದ ಹೊಡೆಯುತ್ತಿದ್ದ ಎನ್ನುವ ಸಂಗತಿಯನ್ನು ಪೊಲೀಸರಿಗೆ ಹೇಳಿಲ್ಲ ಎನ್ನುವುದು

ಸರಿ. ಗೊಲ್ಲರದೊಡ್ಡಿಯವರು ನಮಗೆ ಯಾರೂ ಆ ರೀತಿ ನಮಗೆ ತಿಳಿಸಿಲ್ಲ ಹಾಗೂ ಪೊಲೀಸರಿಗೆ ತಿಳಿಸಿಲ್ಲ ಎನ್ನುವುದು ಸರಿಯಲ್ಲ, ನಾವು ಅಲ್ಲಿಗೆ ಹೋದಾಗ ಸುಕನ್ಯಾ ಸತ್ತು ಬಿದ್ದಿದ್ದಳು, ಮಗು ಅವಳ ಬಳಿ ಇತ್ತು, ಅವಳ ಬಟ್ಟೆ ಹರಿದಿತ್ತು, ಆರೋಪಿಗಳ್ಯಾರೂ ಅಲ್ಲಿ ಇರಲಿಲ್ಲ, ಹಾಗೂ ಈ ಸಂಗತಿಗಳನ್ನು ನಾನು ಪೊಲೀಸರಿಗೆ ಹೇಳಿಲ್ಲ ಎನ್ನುವುದು ಸರಿ.

9. ಸುಕನ್ಯಾ ಗಂಡನ ಜೊತೆ ಮದುವೆ ಆದಾಗಿನಿಂದ ಸಾಯುವವರೆಗೆ ಚೆನ್ನಾಗಿಯೇ ಇದ್ದಳು ಎನ್ನುವುದು ಸರಿಯಲ್ಲ. ಸುಕನ್ಯಾಳ ಸಾವಿಗೆ ಈ ಆರೊಪಿಗಳ್ಯಾರೂ ಕಾರಣರಲ್ಲ ಎನ್ನುವುದು ಸರಿಯಲ್ಲ. ನಮ್ಮ ಅಣ್ಣ ಗಂಗಾಂಜನಪ್ಪನವರು ಈ ಹಿಂದೆ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿರುವುದು ಗೊತ್ತು. ಪ್ರಾಸಾ1 ಮತ್ತು ನಾನು ಒಬ್ಬರಿಗೊಬ್ಬರು ಚರ್ಚಿಸಿ ನಂತರ ನಾನು ಈ ದಿನ ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಮ್ಮ ಅಣ್ಣ ಪ್ರಾ.ಸಾ.1 ರವರ ಮಾತಿನ ಪ್ರಭಾವಕ್ಕೆ ಒಳಗಾಗಿ ಈ ದಿನ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆ : ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

ಓ. ಹೇ. ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಉಮೇಶ್ ಮೂಲಿಮನಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.